

ಮಾನಸಿಕ ತುಮುಲಗಳನ್ನು ಹಿಂಸೆ ಮತ್ತು ಭಾವನೆಗಳ ಬಂಜೆತನದ ರೂಪದಲ್ಲಿ ತಮಗರಿವಿಲ್ಲದಂತೆಯೇ ಮಕ್ಕಳಿಗೆ ರವಾನಿಸುತ್ತಿರುತ್ತಾರೆ. ಹೀಗೆ ಭಾವನಾತ್ಮಕ ಏರುಪೇರುಗಳು ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಯಾಗುತ್ತಲೇ ಇರುತ್ತವೆ. 'ಇವನಿಗೆ ಸಿಟ್ಟು ಬಂದರೆ ಅಜ್ಜನ ತರಹಾನೇ', 'ಅವಳು ಅಮ್ಮನ ರೀತಿಯಲ್ಲಿಯೇ ಸಾಧು' ಎಂದು ನಾವೆಲ್ಲಾ ಹೇಳುವುದರ ಹಿನ್ನೆಲೆ ಇಲ್ಲಿದೆ.

ಟೆರೆನ್ಸ್ ರಿಯಲ್ ಹೇಳುವ ಪ್ರಕಾರ, ನಾವು ಸಾಮಾನ್ಯವಾಗಿ ಗಂಡುಮಕ್ಕಳನ್ನು ಗಟ್ಟಿಯಾಗಿಸುವ ಉದ್ದೇಶದಿಂದ ಹಿಂಸೆಗೆ ಒಳಪಡಿಸುತ್ತೇವೆ ಮತ್ತು ಮೃದುಭಾವನೆಗಳಿಂದ ದೂರವಿಡುತ್ತೇವೆ. ಹೆಣ್ಣುಮಕ್ಕಳಿಗೆ ನಯನಾಜೂಕುಗಳನ್ನು ಕಲಿಸುವ ಉದ್ದೇಶದಿಂದ ತಮ್ಮತನವನ್ನು ಕಂಡುಕೊಳ್ಳಲು ಅವಕಾಶ ಕೊಡದೆ ದುರ್ಬಲರನ್ನಾಗಿ ಮಾಡುತ್ತೇವೆ. ಇದು ಇಬ್ಬರಿಗೂ ಮಾಡುವ ವಂಚನೆಯೇ. ಪುರುಷರ ದಬ್ಬಾಳಿಕೆಯ ನಡುವೆ ತಮ್ಮತನವನ್ನು ಗುರುತಿಸಿಕೊಳ್ಳದೆ ಹೆಣ್ಣು ಖಿನ್ನತೆಯತ್ತ ಸರಿಯುತ್ತಾಳೆ. ಗಂಡಸ್ತನವನ್ನು ಪಡೆಯುವ ಮತ್ತು ಉಳಿಸಿಕೊಳ್ಳುವ ಹೋರಾಟದಲ್ಲಿ ಗಂಡುಮಗು ಪ್ರೀತಿ, ಆತ್ಮೀಯತೆಯಿಂದ ವಂಚಿತನಾಗಿ ಹಿಂಸೆಗೆ ಮೊರೆಹೋಗುತ್ತಾನೆ ಅಥವಾ ನಶೆಯ ವಸ್ತುಗಳಿಗೆ ಅಂಟಿಕೊಳ್ಳುತ್ತಾನೆ. ವೈದ್ಯಕೀಯ ಮಾನದಂಡಗಳ ಪ್ರಕಾರ ಹಿಂಸೆ ಅಥವಾ ನಶೆಯನ್ನು ಖಿನ್ನತೆ ಎಂದು ಕರೆಯಲಾಗದಿದ್ದರೂ ಟೆರೆನ್ಸ್ ರಿಯಲ್‌ನ ಅನುಭವದಲ್ಲಿ ಇದೂ ಒಂದು ರೀತಿಯಲ್ಲಿ ಸುಪ್ತವಾಗಿರುವ ಖಿನ್ನತೆಯೇ. ಹೀಗೆ ಭಾವನಾತ್ಮಕ ಅಸಮತೋಲನದ ಪರಿಣಾಮಗಳನ್ನು ಸ್ತ್ರೀಯರು ತಮ್ಮೊಳಗೇ ತುಂಬಿಕೊಂಡು ಜೀವನದಿಂದ ವಿಮುಖರಾದರೆ ಪುರುಷರು ಅದನ್ನು ಹೊರಪ್ರಪಂಚದಲ್ಲಿ ಹಿಂಸೆ ಮತ್ತು ನಶೆಯ ಮೂಲಕ ವ್ಯಕ್ತಪಡಿಸುತ್ತಾ ಅಸುಖಿಗಳಾಗಿರುತ್ತಾರೆ. ಈ

**ನಾವು ಸಾಮಾನ್ಯವಾಗಿ ಗಂಡುಮಕ್ಕಳನ್ನು ಗಟ್ಟಿಯಾಗಿಸುವ ಉದ್ದೇಶದಿಂದ ಹಿಂಸೆಗೆ ಒಳಪಡಿಸುತ್ತೇವೆ ಮತ್ತು ಮೃದುಭಾವನೆಗಳಿಂದ ದೂರವಿಡುತ್ತೇವೆ.**



